International Journal of Kannada Research 2015; 1(3): 38-42




International Journal of Kannada Research
www.kannadajournal.com

ISSN: 2454–5813
IJSR 2015; 1(3): 33-42
© 2015 IJKS
www.kannadajournal.com
Received: 10-10-2015
Accepted: 11-11-2015

**ಉಮೇಶ ಕ. ಪಾಟೀಲ**
ಸಂಶೋಧನ ವಿದ್ಯಾರ್ಥಿ,
ಡಾ. ಆರ್. ಸಿ. ಹಿರೇಮಠ ಕನ್ನಡ
ಅಧ್ಯಯನ ಪೀಠ. ಕ.ವಿ.ವಿ ಧಾರವಾಡ

**Correspondence**
**ಉಮೇಶ ಕ. ಪಾಟೀಲ**
ಸಂಶೋಧನ ವಿದ್ಯಾರ್ಥಿ,
ಡಾ. ಆರ್. ಸಿ. ಹಿರೇಮಠ ಕನ್ನಡ
ಅಧ್ಯಯನ ಪೀಠ. ಕ.ವಿ.ವಿ ಧಾರವಾಡ
ಉಚಿಡಿಚಿತಿಚಿಡಿ–೫೮೦೦೦೩.

# ವಿಶ್ವ ಧರ್ಮಗಳಲ್ಲಿ ಅಹಿಂಸೆ

**ಉಮೇಶ ಕ. ಪಾಟೀಲ**

ವಿಶಾಲವಾದ ಭೂಮಿಯ ಮೇಲೆ ಲಕ್ಷಾಣು–ಲಕ್ಷ ವರ್ಷಗಳಿಂದ ವಾಸವಾಗಿರುವ ಮನುಷ್ಯ ಜೀವಿಯು ನೈತಿಕತೆಯ ಪಾತಾಳೀಯ ಮೇಲೆ ಸಾಂಗೀಕ ಜೀವನ ನಡೆಸಲು ನಿರ್ಮಿಸಿಕೊಂಡ ಸಾಧನವೆ ಧರ್ಮ. ಗೊಮ್ಮಟವಾಣಿ ಪತ್ರಿಕೆ೨೦೧೩ "ಸಂಸಾರ ದು:ಖತ: ಸತ್ವಾನ್ ಯೋಧರತ್ಯುತ್ತಮೇ ಸುಖೇ" ಈ ಜಗತ್ತಿನ ದು:ಖದಿಂದ ಯಾವುದು ಜೀವಿಗಳನ್ನು ಪಾರುಮಾಡಿ ಸುಖದಲ್ಲಿ ಇಡುವುದೋ ಅದೇ ಧರ್ಮ ಎಂಬುದಾಗಿ ಜೈನಧರ್ಮವು ವಿವರಿಸುತ್ತದೆ. ಇಂದು ಪ್ರಪಂಚದ ಎಲ್ಲಡೆಗೂ ಅಹಿಂಸೆಯ ಧ್ವನಿಯು ಕೇಳಿಬರುತ್ತದೆ ಅದಕ್ಕೆ ಕಾರಣವು ಇದೆ. ನಮ್ಮ ದೇಶ ಪಾರತಂತ್ರ್ಯದಿಂದ ಮುಕ್ತವಾಗಬೇಕಾದರೆ ಅಹಿಂಸಾತ್ಮಕ ಪದ್ಧತಿಯ ಮೂಲಕ ಹೋರಾಟವನ್ನು ನಡೆಸಿತು. ಈ ಅಹಿಂಸಾ ಮಾರ್ಗವನ್ನು ಅವಲಂಭಿಸಿರುವುದರಿಂದ, ರಕ್ತಪಾತವಿಲ್ಲದೆ ನಮಗೆ ಸ್ವಾತಂತ್ರ್ಯಸಿಕ್ಕಿತು. ಆ ಆಧ್ಯಾತ್ಮಿಕ ಆಚರಣೆಯನ್ನ ಇಂದಿನ ಹಲವು ಮಹಾತ್ಮರು ರಾಜಕೀಯ ರಂಗದಲ್ಲಿ ಪ್ರಯೋಗಿಸಿ ಯಶಸ್ಸನ್ನ ಸಂಪಾದಿಸಿದುದು ಕಂಡು ಬರುತ್ತದೆ. ಅಹಿಂಸಾತ್ಮಕ ಆಚರಣೆಯಿಂದ ರಾಷ್ಟ್ರದ ಹಾಗೂ ಆತ್ಮದ ಕಲ್ಯಾಣವಿದೆ. ಅದರಂತೆ ಸಮಷ್ಟಿಯ ಕಲ್ಯಾಣವೂ ಇದೆ. ಆದ್ದರಿಂದ ವಿಶ್ವದ ಎಲ್ಲ ಧರ್ಮಗಳನ್ನು ಗಮನಿಸಿದಾಗ ಅಹಿಂಸೆಯ ತತ್ವಗಳು ಕಂಡುಬರುತ್ತದೆ. ಹೀಗಾಗಿ ಅಹಿಂಸಾ ಧರ್ಮವು ಪರಧರ್ಮವೆನಿಸದೆ, ವಿಶ್ವಧರ್ಮ ಎನಿಸಿದೆ.
ಇಂತಹ ಅಹಿಂಸಾ ಧರ್ಮವನ್ನು ತರ್ಕಸಂಗತವಾಗಿಯೂ ವೈಜ್ಞಾನಿಕ ದೃಷ್ಟಿಯಿಂದ ವಿವರಿಸಿದ ಧರ್ಮ ಜೈನ ಧರ್ಮವಾಗಿದೆ. ಅಲ್ಲದೆ ಬೌದ್ಧರು, ಯಹೂದ್ಯರು, ಝುರತ್ರುಷ್ಟರು, ಇಸ್ಲಾಂರು, ಚೀನಿಯರು ಜಪಾನಯರು ಸಹ ಅಹಿಂಸಾ ತತ್ತ್ವವನ್ನ ಹೇಳುತ್ತಾ ಬಂದಿದ್ದಾರೆ.

## ಹಿಂಸೆ ಮತ್ತು ಅಹಿಂಸೆಯ ಪರಿಕಲ್ಪನೆ

'ಅಹಿಂಸೆ'ಯನ್ನು ಜಗತ್ತಿಗೆ ಸಾರಿದವರು ಜೈನ ತೀರ್ಥಂಕರರು, ಅದರ ಜೊತೆಗೆ 'ಅನೇಕಾಂತ' ಹಾಗೂ 'ಅಪರಿಗ್ರಹ' ಅವರು ಕೊಟ್ಟ ಇನ್ನೆರಡು ಕೊಡುಗೆಗಳಾಗಿವೆ. ಅವುಗಳಲ್ಲಿ ಅಹಿಂಸಾ ತತ್ವವನ್ನು ವಿಶ್ಲೇಷಣೆ ಮಾಡಿದಾಗ, 'ಹಿಂಸೆ' ಏಕೆ ಆಗುತ್ತದೆ? ಎಂದು ಪ್ರಶ್ನೆ ಮಾಡಿಕೊಂಡಾಗ ಹಿಂಸೆಗೆ ಎರಡು ಪ್ರಧಾನ ಕಾರಣಗಳು ಕಂಡು ಬರುತ್ತವೆ. ಒಂದನೇಯ ಕಾರಣ 'ಭಯ' ಮತ್ತು ಎರಡನೇಯ ಕಾರಣ ಸ್ವಾರ್ಥ ಅಥವಾ ಲೋಭ. ಹೀಗೆ ಭಯ, ಸ್ವಾರ್ಥ ಅಥವಾ ಲೋಭ ಎಲ್ಲಿರುತ್ತವೆಯೋ ಅಲ್ಲಿ ಹಿಂಸೆ ಸಂಭವಿಸುತ್ತದೆ. ಹಿಂಸೆಯಲ್ಲಿ ನಾಲ್ಕು ವಿಭಾಗಗಳನ್ನು ಗುರುತಿಸಬಹುದು. ೧)ಉದ್ಯೋಗಹಿಂಸೆ, ೨)ಆರಂಭಹಿಂಸೆ, ೩)ವಿರೋಧ ಹಿಂಸೆ ಮತ್ತು ೪)ಸಂಕಲ್ಪ ಹಿಂಸೆ. ನಮ್ಮ ಹೃದಯದ ಅಂತರಾಳದಿಂದ ಇವುಗಳನ್ನು ಕಿತ್ತೆಸೆದಾಗ ಅಲ್ಲಿ ಅಹಿಂಸೆ ಎಂಬ ಪುಷ್ಪ ಅರಳುತ್ತದೆ. ಅಹಿಂಸೆ "ಸಂಕಲ್ಪತಕೃತಕಾರಿತ ಮನನಾದ್ಯೋಗ ತ್ರಯಸ್ಯಚರ ಸತ್ವಾನ್!ನ ಹಿನಸ್ತಿ ಯತ್ತ ದಾಹುಃ ಸ್ಥೂಲ ಮಧಾದ್ವಿರಮಣಂ ನಿಪುಣಾಃ॥"[೧] ಮನೋವಾಕ್ಯಗಳ ಸಂಕಲ್ಪದಿಂದಲೂ ಕೃತಕಾರಿತ ಅನುಮೋದಗಳಿಂದಲೂ ದ್ವೀಂದ್ರಿಯಾದಿ ಪ್ರಾಣಿಗಳನ್ನು ಹಿಂಸಿಸದಿರುವುದು ಅಹಿಂಸೆವೆನಿಸುತ್ತದೆ.
ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ. ಇಲ್ಲಿ ಬಹು ಧರ್ಮಿಯರು ನೆಲೆಸಿದ್ದಾರೆ. ಆದ್ದರಿಂದ ಅವರು ತಮ್ಮ ಧರ್ಮದ ಬಗ್ಗೆ ಅಭಿಮಾನ ಹೊಂದಿರುವುದರೊಂದಿಗೆ ಪರಧರ್ಮದ ತತ್ವಾದರ್ಶಗಳನ್ನು ಅರಿತು ಗೌರವಿಸುತ್ತ ಸಹೋದರರಂತೆ ಸಹಬಾಳ್ವೆ ನಡೆಸುತ್ತಿದ್ದಾರೆ. ಅಂಹಿಸಾ ತತ್ತ್ವವು ಯಾವುದೇ ದೇಶ ಶಾಂತಿ, ಸ್ಥಿರತೆ ಹಾಗೂ ಪ್ರಗತಿ ಪಥದಲ್ಲಿ ಮುನ್ನಡೆಯುವುದಕ್ಕಿರುವ ಮೂಲ ಸೂತ್ರವಾಗಿದೆ. ಗತಕಾಲದ ಇತಿಹಾಸವನ್ನು ನೋಡುತ್ತಾ ಬಂದರೆ, ಭರತಖಂಡವು ಅಷ್ಟೇ ಅಲ್ಲ ಇಡೀ ವಿಶ್ವವೇ ಹಿಂಸೆಯಿಂದ ಅಹಿಂಸೆಯತ್ತ ಸಾಗುತ್ತ ಬಂದಿರುವದು ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ

[1] ಪ್ರಧಾನ ಸಂಪಾದಕರು : ಶ್ರೀ ಜೀವಂಧರಕುಮಾರ ಹೋತಪೇಟೆ – ಅಹಿಂಸೆ, ಪು. 30.

ವೈದಿಕರು ಯಜ್ಞ-ಯಾಗಾದಿಗಳನ್ನು ಮಾಡಿ ಅದರಲ್ಲಿ ಪ್ರಾಣಿ ಬಲಿಯನ್ನು ಮಾಡುತ್ತಿದರು. ಅದನ್ನು ತಡೆಯಲು ಹುಟ್ಟಿದ ಧರ್ಮವೇ ಜೈನ ಹಾಗೂ ಬೌದ್ಧಧರ್ಮ. ಆದರೂ ಮೊದಲಿನಿಂದಲೂ ಅಹಿಂಸೆಯ ತತ್ತ್ವಗಳನ್ನು ಎತ್ತಿಹಿಡಿದದ್ದೇ ಜೈನಧರ್ಮವಾಗಿದೆ. ಭಾರತೀಯ ದರ್ಶನ, ರಾಮಯಣ ಹಾಗೂ ಮಹಾಭಾರತ, ಐತರೇಯ ಬ್ರಾಹ್ಮಣ, ಶತಪತ ಬ್ರಾಹ್ಮಣ, ಛಾಂದೋಗ್ಯ ಉಪನಿಷತ್ತು, ವಾಮನ ಪುರಾಣ ಮತ್ತು ಮನುಸ್ಮೃತಿಗಳಲ್ಲಿ ಅಹಿಂಸಾ ತತ್ತ್ವದ ಉಲ್ಲೇಖ ಕಂಡು ಬರುತ್ತದೆ.

- 'ಅಹಿಂಸಾ ಪರಮೋಧರ್ಮ:........' –ಆದಿಪರ್ವ
- 'ಸರ್ವತೀರ್ಥೇಷು ವಾ ಸ್ನಾನಂ ಸರ್ವಭೂತೇಷು ಚಾರ್ಜವಂ !' –ಉದ್ಯೋಗಪರ್ವ
- 'ಅಹಿಂಸಮಾ ಚ ದಾನೇನ ತಪ್ಯಮಾನ: ಸನಾತನಂ'

ಹೀಗೆ ಮಹಾಭಾರತದಲ್ಲಿ ಅಹಿಂಸೆಯ ಉಲ್ಲೇಖವನ್ನು ಕಾಣಬಹುದಾಗಿದೆ. ಹಾಗೇ ಕಾಲಿದಾಸ, ಭವಭೂತಿ ಕವಿಗಳ ಕಾವ್ಯಗಳಲ್ಲಿ ಹಿಂಸೆ-ಅಹಿಂಸೆಯ ವರ್ಣನೆಯು ಸಿಗುವುದು.

ಈ ವಿಶ್ವದಲ್ಲಿನ ಪ್ರತಿಯೊಂದು ಜೀವರಾಸಿಯನ್ನು ಪ್ರಗತಿಯ ಕಡೆಗೆ ಕರೆದ್ಯೊಯುವ ಹಾಗೂ ಸುಖದ ದಾರಿಯಲ್ಲಿ ನಡೆಸುವ ಅಶ್ವಾಸನೆಯನ್ನ ನೀಡುವದೇ ಅಹಿಂಸಾಧರ್ಮ. ಈ ದೃಷ್ಟಿಯಿಂದ ಯಾರನ್ನು ಯಾವ ವಿಧದಲ್ಲೂ ನೋಯಿಸದೆ ಇರುವದು ಅತಿ ಮುಖ್ಯವಾಗುತ್ತದೆ. ಪಶು-ಪಕ್ಷಿ, ಕ್ರಿಮಿ-ಕೀಟ, ಉರಗಾದಿಗಳಿಗೆ ಯಾವುದಕ್ಕೂ ನೋವುಂಟು ಮಾಡದಿರುವುದು ಒಂದು ಶ್ರೇಷ್ಠ ಸದ್ಗುಣವಾಗಿರುತ್ತದೆ, ಇದನ್ನೆ ಅಹಿಂಸೆ ಎನ್ನುವರು.

**ಅಹಿಂಸೆಯ ಅರ್ಥ, ವ್ಯಾಖ್ಯೆ**

ಜೈನಧರ್ಮದಲ್ಲಿ ಮುನಿಗಳು ಮತ್ತು ಶ್ರಾವಕರಿಗೆ 'ಪಂಚಾಣುವ್ರತ'ಗಳು ರತ್ನತ್ರಯವನ್ನು ಸಾಧಿಸಲು ಮೆಟ್ಟಿಲುಗಳಾಗಿವೆ. ಅವುಗಳಲ್ಲಿ ಮೊದಲನೆಯದು ಅಹಿಂಸಾಣುವ್ರತ. ಅಹಿಂಸೆ ಬಗೆಗೆ ಅನೇಕ ಮುನಿಗಳು, ವಿದ್ವಾಂಸರು ತಮ್ಮದೆಯಾದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.

- 'ತನ್ನ ಮಾಂಸವನ್ನು ಮತ್ತೊಂದು ಪ್ರಾಣಿಯ ಮಾಂಸದಿಂದ ವೃದ್ಧಿಸಿಕೊಳ್ಳುವವನಿಗೆ ಎಂದೂ ಮಾನಸಿಕ ಶಾಂತಿ ದೊರಕುವುದಿಲ್ಲ.' –ಮಹಾಭಾರತ
- 'ಹಿಂಸೆಯ ಬಗ್ಗೆ ಯೋಚಿಸುವದು, ಹಿಂಸೆಗೆ ಪ್ರೋತ್ಸಾಹ ಕೊಡುವುದು ಹಿಂಸಾಚಾರದಲ್ಲಿ ತೊಡಗುವದು ಎಲ್ಲವೂ ಪಾಪ ಕಾರ್ಯಗಳು'– ಭಗವಾನ ಮಹಾವೀರ
- ಆಚಾರ್ಯ ಅಮೃತಚಂದ್ರ ಸೂರಿ : 'ರಾಗ ಮತ್ತು ಕಷಾಯಗಳಲ್ಲಿದಿರುವಿಕೆಯೇ ಅಹಿಂಸೆ' ಜೈನ ಧರ್ಮಕ್ಕೊಂದು ಕೈಪಿಡಿ –ಅನುವಾದ ಎಸ್.ಪಿ.ಪದ್ಮಪ್ರಸಾದ ಪುಟ ಸಂಖ್ಯೆ ೨೨೨ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
- ಆಚಾರ್ಯ ಸಮಂತಭದ್ರರು : ' ಅಹಿಂಸಾ ಭೂತಾನಾಂ ಜಗತಿ ವಿದಿತ ಬ್ರಹ್ಮ ಪರಮಂ' ಶ್ರೀ ಸದಾ ಸಾಗರ (ಅನುವಾದಕರು, ಸಂಪಾದಕರು) – ಅಮೃತವಾಣಿ ಪುಟ ಸಂಖ್ಯೆ ೭೮ ಹೇಳಿದ್ದಾರೆ.

"ಅಹಿಂಸೆಯೆ ಪರಮ ಧರ್ಮ; ಅಹಿಸೆಯೇ ಪರಮ ಬ್ರಹ್ಮ, ಅಹಿಂಸೆಯೇ ಸುಖ ಶಾಂತಿದಾಯಕ; ಅಹಿಂಸೆಯೇ ಸಂಸಾರತಾರಕ. ಇದೇ ಮಾನವನ ನಿಜವಾದ ಧರ್ಮ; ಇದೇ ಮಾನವನ ನಿಜವಾದ ಕರ್ಮ. ಇದೇ ವೀರರ ದಿವ್ಯ ಅಸ್ತ್ರ; ಇದೇ ಧೀರರ ಭವ್ಯಭೂಷಣ. ಅಹಿಂಸೆಯಿಲ್ಲದಿದ್ದರೆ ಮಾನವನ ಜೀವನಕ್ಕೆ ಶಾಂತಿಯೂ ಇಲ್ಲ; ಶೋಭೆಯೂ ಇಲ್ಲ. ಮಾನವ ಮತ್ತು ದಾನವರಲ್ಲಿರುವ ವ್ಯತ್ಯಾಸವೆಂದರೆ ಕೇವಲ ಹಿಂಸೆ ಹಾಗೂ ಅಹಿಂಸೆ. ಅಹಿಂಸೆ ಮಾನವೀಯ ಗುಣವಾದರೆ ಹಿಂಸೆ ದಾನವರ ಗುಣ."[2]

ಹೀಗೆ ಅಹಿಂಸೆಯ ಕುರಿತು ಅನೇಕ ಕೃತಿಗಳಲ್ಲಿ, ಮುನಿಗಳು ಹಾಗೂ ವಿದ್ವಾಂಸರು ತಮ್ಮದೆಯಾದ ವ್ಯಾಖ್ಯೆಯನ್ನು ನೀಡಿದ್ದಾರೆ. ಮಾನವನ ಬದುಕೇ ಒಂದು ಯಜ್ಞ, ಈ ಯಜ್ಞದಲ್ಲಿ ನೀಡಬೇಕಾದ ಐದು ದಕ್ಷಣೆಗಳಲ್ಲಿ ಅತಿ ಮಹತ್ವವಾದದು-ಅಹಿಂಸಾ ತತ್ತ್ವ ಒಂದು ಎಂದು ಛಾಂದೋಗ್ಯ ಉಪನಿಷತು ಸಾರುತ್ತದೆ. ವಿಶ್ವದ ಎಲ್ಲಾ ಧರ್ಮಗಳೂ ಹಿಂಸೆಯನ್ನು ವಿರೋಧಿಸುತ್ತವೆ. ಪ್ರೀತಿ, ವಿಶ್ವಾಸ, ಶಾಂತಿ, ನೆಮ್ಮದಿಯನ್ನು ಎತ್ತಿಹೇಳುತ್ತವೆ. ದ್ವೇಷ, ಮೋಸ ಹಿಂಸೆಗಳನ್ನು ವಿರೋಧಿಸುವ ಎಲ್ಲಾ ಧರ್ಮಗಳೂ ಅಹಿಂಸೆಯನ್ನ ಎತ್ತಿ ಹಿಡಿಯುತ್ತವೆ.

**ಬೌದ್ಧಧರ್ಮದಲ್ಲಿ ಅಹಿಂಸೆ**

ಸುಮಾರು ೨೦ ಶತಮಾನಗಳ ಹಿಂದೆ ನಡೆಯುತ್ತಿದ್ದ ಯಜ್ಞ-ಯಾಗದಲ್ಲಿ ಪಶುಬಲಿಗಳಿಗೆ ಪ್ರತಿಕ್ರಿಯಯಾಗಿ ಅಹಿಂಸೆಯೇ ಮೂಲಮಂತ್ರವೆಂದು ಭೋಧಿಸಿದವ ಗೌತಮ ಬೌದ್ಧ. ಅತನು ಭೋಧಿಸಿ ಧರ್ಮವೇ ಬೌದ್ಧ ಧರ್ಮ. ಮುಂದೆ ಬೌದ್ಧಧರ್ಮವು ಜಾಗತಿಕ ಕ್ರಾಂತಿಯನ್ನುಂಟು ಮಾಡಿತು. ಅಹಿಂಸೆಯಿಂದಾಗಿಯೇ ವಿಶ್ವಧರ್ಮವೆನಿಸಿತು. ಅಹಿಂಸೆಯಿಂದಲೇ ಹಿಂಸೆಯನ್ನ ಗೆಲ್ಲಬೇಕೆಂದು ಬುದ್ದನು ಉಪದೇಶಿಸಿದರೆ, ಸಾಮ್ರಾಟ ಅಶೋಕನು ಕಳಿಂಗಯುದ್ದ ಗೆದ್ದ ಬಳಿಕವೂ ವಿರಕ್ತನಾಗಿ ಅಹಿಂಸಾವ್ರತಿಕನಾಗಿ ವಿಶ್ವದ ಇತಿಹಾಸದಲ್ಲಿಯೇ ಗಣ್ಯ ಚಕ್ರವರ್ತಿಯೆನಿಸಿದನು. ಭಗವಾನ ಬುದ್ಧರು ತಮ್ಮ 'ಧಮಪದದ' ಒಂದು ಗಾಹೆಯಲ್ಲಿ "ಹಿಂಸೆಗೆ ಎಲ್ಲರೂ ನಡುಗುವರು, ಮರಣಕ್ಕೆ ಎಲ್ಲರೂ ಹೆದರುವರು, ತನ್ನ ಹಾಗೆ ಇತರರು ಎಂದು ಯೋಚಿಸಿ ಇತರರನ್ನು ಕೊಲ್ಲಬಾರದು ಅಥವಾ ಕೊಲ್ಲಿಸಬಾರದು ಎಂದು ತಿಳಿಸಿದ್ದಾರೆ."[3] ಇದು ಇಂದು ಪುಸ್ತಕದಲ್ಲಿ ಮಾತ್ರ ಕುಳಿತು ಕೊಂಡಿದೆ. ಆದರೆ ಈ ತತ್ತ್ವವು ಮನುಷ್ಯನ ಮನಸ್ಸಿನಲ್ಲಿ ಇಲ್ಲವಾಗುತ್ತಾ ಸಾಗುತ್ತಿದೆ. ಅದರೆ ನಮಗೆ ಮನಸ್ಸಿದೆ ಎಂಬ ವಿಷಯ ಅನೇಕ ಜನರು ಮರೆತಿದ್ದಾರೆ. ಮನಸ್ಸಿನ್ನು ಸರಿಮಾಡಿಕೊಳ್ಳಲು ಸಾದ್ಯವಾದರೆ ನಾವು ಮಾಡತಕ್ಕಂತಹ ಸರಿ ತಪ್ಪುಗಳನ್ನ ನಡೆ ನುಡಿ, ಆಚಾರ ವಿಚಾರಗಳನ್ನು ಸರಿ ಮಾಡಿಕೊಳ್ಳಬಹುದು.

"ಇಡೀ ಬೌದ್ಧ ಧರ್ಮದ ಸಾರವೆಂದರೆ ಪಾಪ ಕಾರ್ಯ ಮಾಡಬೇಡ, ಪುಣ್ಯಕಾರ್ಯದಲ್ಲಿ ತೊಡಗು, ಮನಸ್ಸನ್ನು ಅಭಿವೃದ್ಧಿಪಡಿಸಿಕೊಂಡು ಮನದಲ್ಲಿರುವ ಎಲ್ಲ ಕಲ್ಮಶಗಳನ್ನು ತೆಗೆದು ಹಾಕು, ಇದೇ ಬುದ್ಧರ ಶಾಸನ"[4] ಭಗವಾನ ಬುದ್ಧರು ಧರ್ಮಪದದ ಅನೇಕ ಗಾಹೆಗಳಲ್ಲಿ ಹೇಳಿದ ಪ್ರಮುಖ ವಿಚಾರ ವೆಂದರೆ 'ವೈರದಿಂದ ವೈರೆ ಎಂದೂ ಶಮನವಾಗುವುದಿಲ್ಲ' ವೈರದಿಂದ ಸಮಾಜ ನಿರ್ಮೂಲನವಾಗಿ, ಇಡೀ ಮನುಕುಲವೇ ಹಾಳಾಗುತ್ತದೆ. ಆದ್ದರಿಂದ ವೈರಭಾವವನ್ನ ಬಿಟ್ಟು ಮಾತುಕತೆಯ ಮೂಲಕ ಪ್ರೀತಿ ವಿಶ್ವಾಸದಿಂದ ನಾವು ಬದುಕಿದರೆ ಜಗತ್ತು ಶಾಂತವಾಗಿ ಇರುತ್ತದೆ. ಇಂದಿನ ಜಗತ್ತಿನ ಅಶಾಂತಿಯನ್ನು ನೋಡಿದರೆ ಅಹಿಂಸೆ ಹಿಂದಿಗಿಂತಲೂ ಇಂದು ಅಗತ್ಯವಾಗಿದೆ. ಹಾಗೆ ವಿಶ್ವದ ಮೇಲೆ ಮಾನವ ಕುಲ ಇರುವವರೆಗೂ ಅಗತ್ಯ ಎಂದೆನಿಸುತ್ತದೆ. ಒಟ್ಟಾರೆಯಾಗಿ ಬೌದ್ಧ ಧರ್ಮ ಭಾರತದಲ್ಲಿ ಹುಟ್ಟಿದರೂ ಭಾರತದಲ್ಲಿ ಶಾಶ್ವತವಾದ ನೆಲೆ ಕಂಡುಕೋಳ್ಳುವಲ್ಲಿ ವಿಫಲವಾಯಿತು. ಭಾರತದಲ್ಲಿನ ಬೌದ್ಧ ಮೂಲನಿವಾಸಿಗಳೆಲ್ಲ

---

[2] ಶ್ರೀ ಸದಾ ಸಾಗರ (ಅನುವಾದಕರು, ಸಂಪಾದಕರು) – ಅಮೃತವಾಣಿ ಪುಟ ಸಂಖ್ಯೆ ೦೪

[3] ಅಹಿಂಸೆ – ಬಿ.ವಿ. ರಾಜಾರಾಂ ಪುಟ ಸಂಖ್ಯೆ ೨೨

[4] ಪ್ರದಾನ ಸಂಪಾದಕರು ಶ್ರೀ ಜೀವಂಧರಕುಮಾರ, ಹೋತಪೇಟಿ, 'ಅಹಿಂಸೆ,' ಪು. 28

ನೇಪಾಳ, ಚೀನಾ ಹೊರದೇಶಗಳಿಗೆ ಹೋಗಿ ನೆಲೆಕಂಡುಕೊಂಡಿದ್ದಾರೆ.

**ಯಹೂದ್ಯರಲ್ಲಿ ಅಹಿಂಸೆ**

ಭಾರತದ ಶ್ರವಣ ಧರ್ಮಪರಂಪರೆಯಲ್ಲಿ ಭಗವಾನ ಬುದ್ದ – ಮಹಾವೀರರು ಜನಿಸಿದಂತೆ, ಯಹುದಿಯರ 'ಏಸೀನ' ಪಂಥದಲ್ಲಿ ಏಸೂಕ್ರಿಸ್ತನು ಜನಿಸಿದನು. ಮುಂದೆ ಅದೇ ಕ್ರಿಸ್ತಧರ್ಮವಾಯಿತು. ಇಲ್ಲಿ ಯಹೂದೀ ಧರ್ಮದ ಹುಟ್ಟು ಅದರ ಬೆಳವಣಿಗೆಯ ಬಗೆಗೆ ಚರ್ಚಿಸುವದಿಲ್ಲ ಕೇವಲ ಇಲ್ಲಿ ಅಂಹಿಸಾತ್ಮಕ ಅಂಶವನ್ನು ಮಾತ್ರ ಸಂಕ್ಷಿಪ್ತವಾಗಿ ಹೇಳಲಾಗುವದು. ಇಸ್ಲಾಂ ಧರ್ಮಕ್ಕಿಂತ ಪ್ರಾಚೀನವಾದ ಯಹೂದೀ ಧರ್ಮವು ಕೂಡಾ ಅಹಿಂಸೆಗೆ ಮಾನ್ಯತೆ ನೀಡಿದೆ. "ಒಬ್ಬ ಯಹುದಿಪ್ರವಾದಿ ನನಗೆ ಪಶುಯಜ್ಞಕ್ಕಿಂತಲೂ ಕರುಣೆಯೇ ಹೆಚ್ಚು ಇಷ್ಟ, ಆಹಾರ ಸಂಪಾದನೆಗಾಗಿ ಅನ್ಯರಿಗೆ ಕಷ್ಟವಾಗದ ಒಕ್ಕಲತನವೇ ಮಾಡಬೇಕು ಎಂದು ಹೇಳುತ್ತಾನೆ"[೫]. ಬೈಬಲ್ ಗ್ರಂಥದ ಒಂದು ಭಾಗವೇ ಆದ ದಶ ಆಜ್ಞೆಗಳು ಬಹುಮುಖ್ಯವಾಗಿವೆ. ಅವು ಶಕ್ತಿಯ ಸಾಧನೆಗಳಿಂದ, ಆತ್ಮದ ಚೇತನದಿಂದ ಎಲ್ಲವನ್ನೂ ಪ್ರೀತಿಸಿರಿ ಎಂದು ಹೇಳುತ್ತವೆ.

ಯೇಸುಕ್ರಿಸ್ತನ ಮುಕ್ತ ಸ್ಫೂರ್ತಿಯ ಚಿಂತನೆಯಿಂದ ಪ್ರೇರಿತವಾದ ಕ್ರೈಸ್ತ ಧರ್ಮವು ದ್ವೇಷ, ಶತ್ರುತ್ವ, ಹಿಂಸೆಯನ್ನ ತ್ಯಜಿಸಿ, ಪ್ರೀತಿ, ಸ್ನೇಹ, ಸಹಕಾರ, ಅಹಿಂಸೆಯ ತತ್ವವನ್ನು ಪಾಲಿಸುತ್ತಾ ಬದುಕಿರಿ ಎಂದು ಬೋಧಿಸುವ ಧರ್ಮವಾಗಿದೆ. ನಿಮ್ಮ ಹಗೆಯನ್ನ ಪ್ರೀತಿಸಿರಿ, ನಿಮ್ಮನ್ನು ಬಯ್ಯುವವರನ್ನು ಹರಸಿರಿ, ದ್ವೇಷಿಗಳಿಗೆ ಒಳಿತನ್ನ ಮಾಡಿರಿ, ನಿಮ್ಮನ್ನು ಮಾತ್ಸರ್ಯದಿಂದ ಕಾಡುವವರಿಗೂ ಪ್ರಾರ್ಥನೆ ಮಾಡಿರಿ ಹಾಗೂ ಸ್ವರ್ಗದಲ್ಲಿರುವ ನಿಮ್ಮ ತಂದೆಗೆ ತಕ್ಕ ಮಕ್ಕಳಾಗುವಂತೆ ಪ್ರಾರ್ಥಿಸಿರಿ. ಈ ಮೇಲಿನ ಹೇಳಿಕೆಗಳು ಜೈನಧರ್ಮದ ತತ್ವಗಳಿಗೆ ಹೋಲಿಕೆಯಾಗುತ್ತವೆ.

ಯೇಸುವಿನ ಐದು ಆದೇಶಗಳಲ್ಲಿ ನಾಲ್ಕನೆಯದು ಅಹಿಂಸೆಗೆ ಒತ್ತು ನೀಡುತ್ತದೆ. ಕಣ್ಣಿಗೆ ಬದಲು ಕಣ್ಣು, ಹಲ್ಲಿಗೆ ಬದಲು ಹಲ್ಲು, ಮುಯ್ಯಿಗೆ–ಮುಯ್ಯಿ ಎಂಬ ದೋರಣೆ ಸರಿಯಲ್ಲ. ಯಾರಾದರೂ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನ ಮುಂದೆ ಮಾಡು ಪ್ರತೀಕಾರ ಬೇಡ ಎಂಬ ಉದಾತ್ತವಾದ ಸಂದೇಶ ಈ ಧರ್ಮದಲ್ಲಿದೆ.

**ಇಸ್ಲಾಂ ಧರ್ಮದಲ್ಲಿ ಅಹಿಂಸೆ**

ಇಸ್ಲಾಂಧರ್ಮದ ಉದಯವು ಅರಬಸ್ತಾನದಲ್ಲಿ ಆಗಿದೆ. ಅದು ನಂತರ ಭಾರತವನ್ನು ಪ್ರವೇಶಿಸಿತು. ಇಲ್ಲಿ ಬಹುದಿನಗಳವರೆಗೆ ಜೈನಧರ್ಮ ಹಾಗೂ ಇಸ್ಲಾಂ ಧರ್ಮಗಳು ಕೂಡಿಯೇ ಬಾಳಿರುವವು. ಆದ್ದರಿಂದ ಒಂದು ಧರ್ಮದ ಪ್ರಭಾವ ಇನ್ನೊಂದು ಧರ್ಮದ ಮೇಲೆ ಆಗಿರುವುದು ಕಂಡುಬರುತ್ತದೆ. ಇಸ್ಲಾಂಧರ್ಮ ಮತ್ತು ಜೈನಧರ್ಮದಲ್ಲಿ ಮೂರ್ತಿಪೂಜೆಗೆ ವಿರೋಧ ಮಾಡುವಲ್ಲಿ ಸಾಮ್ಯತೆ ಇದೆ. ಇಸ್ಲಾಂ ಧರ್ಮ ಮನುಷ್ಯನ ನಡುವಳಿಕೆಯನ್ನು ನಿಯಂತ್ರಿಸಿ, ಪರಸ್ಪರರಲ್ಲಿ ಶಾಂತಿಯುತ ಸಹಬಾಳ್ವೆ, ಸೋದರತ್ವ ಭಾವವನ್ನು ಬೆಳೆಸಿ, ಎಲ್ಲರೂ ಒಂದೇ ಕುಟುಂಬದವರೆಂದು ಬೋಧನೆ ಮಾಡುತ್ತದೆ.

ಪ್ರವಾದಿ ಮಹಮ್ಮದರವರು ಕೊನೆಯ ಹಜ್‌ನಲ್ಲಿ ತಮ್ಮ ಮತ್ತು ಜನರ ನಡುವಿನ ಸಂಬಂಧವನ್ನ ಗುರುತಿಸುವಾಗ ಒಡೆಯ ಮತ್ತು ಸೇವಕ ಸಂಬಂಧವನ್ನು ಗುರುತ್ತಿಸುತ್ತಾರೆ. ಹೀಗಾದಾಗ ಒಬ್ಬನೆ ಒಬ್ಬ ಒಡೆಯ ಅವನ ಜೊತೆಗೆ ಅವನ ಎದುರಿಗೆ ಶರಣಾಗತನಾಗತಕ್ಕಂತಹ ಭಕ್ತ. ಬೇರೆ ಪ್ರಭುವಿಗಾಗಲಿ, ಬೇರೆ ಮನುಷ್ಯನಿಗಾಗಲಿ, ಬೇರೆ ಒಡೆಯನಿಗಾಗಲಿ, ಬೇರೆ ಯಜಮಾನನಿಗಾಗಲಿ ತನ್ನ ಸರ್ವಸ್ವವನ್ನು ಸಮರ್ಪಿಸಿ ಆತನ ಎದುರಿಗೆ ಶರಣಾಗುವುದಿಲ್ಲ. ಹೀಗೆ ಗುಲಾಮಗಿರಿ ಹಾದಿಯಿಂದ ವಿಮೋಚನೆ ಪಡೆಯತಕ್ಕಂತಹ ಒಂದು ಮಾನಸಿಕ ಸಿದ್ಧತೆಯನ್ನು ಇಸ್ಲಾಂ ತನ್ನ ಅನುಯಾಯಿಗಳಿಗೆ ನೀಡುತ್ತದೆ. ಭಯಗಳಿಂದ ದೂರನಾಗಿ ಭಗವಂತನೆದುರಿಗೆ ಶರಣಾಗತನಾದಂತಹ ವ್ಯಕ್ತಿ ಎಲ್ಲ ಭಯಗಳಿಂದ ಮುಕ್ತನಾಗುತ್ತಾನೆ. ಮೂಢ ನಂಬಿಕೆಗಳಿಂದ ಬಿಡುಗಡೆಯಾಗುತ್ತಾನೆ ಇಸ್ಲಾಂನಲ್ಲಿ ಮೂಢ ನಂಬಿಕೆಗಳಿಗೆ ಆಸ್ಪದವಿಲ್ಲ.

ಜೈನಧರ್ಮದ ಪ್ರಭಾವವು ಇಸ್ಲಾಂಧರ್ಮದ ಮೇಲೆ ಆದ್ದದು ಕಾಣಬರುತ್ತದೆ. "ಅರಬರ ಪ್ರಸಿದ್ಧ ಕವಿಯಾದ "ಅಬುಲ್ ಅಲ್ಲಾ" ಕ್ರಿ.ಶ ೯೭೩–೧೦೫೮ ಎಂಬುವದು ತನ್ನ ನೈತಿಕ ಸಿದ್ಧಾಂತದಲ್ಲಿ ಹೀಗೆ ಹೇಳುತ್ತಾನೆ, ಅಬುನ್ ಅಲ್ಲಾ ಕೇವಲ ಧಾನ್ಯಾಹಾರವನ್ನ ಮಾತ್ರ ಸ್ವೀಕರಿಸುತ್ತಿದ್ದನು ಹಾಲನ್ನು ಸಹ ಕುಡಿಯುತ್ತಿರಲ್ಲಿಲ, ಮಾತೆಯ ಸ್ತನಗಳಲ್ಲಿ ಇರುವ ಹಾಲು ಅವಳ ಮಕ್ಕಳಿಗೆ ಮಾತ್ರ ಇರುತ್ತವೆ ಅದರಂತೆ ಪಶುಗಳ ಹಾಲೂ ಸಹ ಕರುಗಳಿಗೆ ಮಾತ್ರ ಇರುತ್ತವೆ, ಅದನ್ನು ಕುಡಿಯುವದು ಪಾಪಕರವೆಂದು ತಿಳಿದು ಅವನು ಹಾಲನ್ನು ಸ್ವೀಕರಿಸುತ್ತಿರಲಿಲ್ಲ. ಜೇನುತುಪ್ಪ, ತತ್ತಿಗಳನ್ನು ಸಹ ತಿನ್ನುತ್ತಿರಲ್ಲಿ. ಕಾಲಲ್ಲಿ ಕಟ್ಟಿಗೆಯ ಜೋಡುಗಳನ್ನ ಮೆಡ್ಡುತ್ತಿದ್ದನು ಚರ್ಮದ ಉಪಯೋಗವು ಹಿಂಸೆಗೆ ಕಾರಣವೆಂದು ಭಾವಿಸಿದನು.ನ್ನು ಇದನ್ನು ನೋಡಿದಾಗ ಇವನು ಜೈನಧರ್ಮದ ಅನೇಕ ಸಿದ್ಧಾಂತಗಳನ್ನು ಸ್ವೀಕರಿಸಿದ್ದಾರೆ." [೬]

ಇಸ್ಲಾಂದ ಮೂಲ ಗ್ರಂಥ ಕುರಾನ್ ಹೇಳುತ್ತದೆ ಭಗವಂತನ ಅಸೀಮವಾದ ಜ್ಞಾನ, ಶಕ್ತಿ ಕರುಣೆಗಳ ಆಗರ ನಿಷ್ಠೆಯಿಂದ ಮಾಡುವ ಕಾರ್ಯಗಳಿಂದ ಮಾನವನಿಗೆ ನೆಮ್ಮದಿ ದೊರೆಯುತ್ತದೆ. ಆತ್ಮದ ಪರಿಶುದ್ದತೆಯನ್ನು ಕಾಪಾಡಿ ಕೊಂಡವನು ಗೆದ್ದ ದೇವರ ಸೇವೆಯೆ ಮಾನವನ ಧ್ಯೇಯ, ಹಿಂಸೆ ಸರ್ವಥಾ ಸಲ್ಲದು !ಧರ್ಮಾವಲಂಬನವೇ ಮನುಷ್ಯನನ್ನು ವಿನಾಶದಿಂದ ಪಾರು ಮಾಡ ಬಲ್ಲದು ಮನುಷ್ಯನ ಬದುಕನ್ನು ಸದಾಚಾರ ಸದ್ಗುಣಗಳ ಉನ್ನತ ಪಥದ ಮೇಲೆ ಕೊಂಡುಯ್ಯುವ ಇಸ್ಲಾಂಧರ್ಮದ ಸಶಕ್ತ ವಿಚಾರಗಳ ಪೈಕಿ ಅಹಿಂಸಗೂ ಸಾಕಷ್ಟು ಮಹತ್ವವಿದೆ.

**ಅಹಿಂಸೆಯ ಮೇರುಧರ್ಮ ಜೈನಧರ್ಮ**

ಧರ್ಮವೆಂಬ ವಸ್ತುವಿಗೆ ಎರಡು ಮುಖ. ಸತ್ಯ ಒಂದು ಮುಖವಾದರೆ ಅಹಿಂಸೆ ಮತ್ತೊಂದು ಮುಖ. ಎಲ್ಲಿ ಸತ್ಯ ಇದೆಯೋ ಅಲ್ಲಿ ಅಹಿಂಸೆ ಇದೆ. ಎಲ್ಲಿ ಅಹಿಂಸೆ ಇದೆಯೋ ಅಲ್ಲಿ ಸತ್ಯ ಇದೆ. ಸತ್ಯ–ಅಹಿಂಸೆಗಳಿದ್ದಲ್ಲಿ ಧರ್ಮ ಇದೆ. ವಿಶ್ವದ ಧರ್ಮಗಳಲ್ಲಿ ಅಹಿಂಸೆಗೆ ಉನ್ನತ ಸ್ಥಾನವನ್ನು ನೀಡಿದ ಧರ್ಮವೆಂದರೆ–ಜೈನಧರ್ಮ ಎಂದು ಹೇಳಲಾಗುತ್ತದೆ. ಜೈನಧರ್ಮದಲ್ಲಿ 'ಅಹಿಂಸಾ ಪರಮೋಧರ್ಮಃ' ಎಂದು ಹೇಳಿದ್ದಾರೆ. ಅಹಿಂಸೆಯು ಜೈನರ್ಧಮದಲ್ಲಿ ಆಧಾರಸ್ಥಂಬದಂತೆ ಇರುತ್ತದೆ. ಜೈನಧರ್ಮದಲ್ಲಿ ಪ್ರತಿಯೊಂದು ಪ್ರಾಣಿಯ ಕುರಿತಾಗಿ ಕಲ್ಯಾಣ ಭಾವನೆಯು ಅಡಗಿದೆ. ಜೈನಧರ್ಮದಲ್ಲಿ ಪ್ರತಿಯೊಂದು ಪ್ರಾಣಿಯ ಕುರಿತಾಗಿ, ಮನುಷ್ಯ, ಪಶು, ಪಕ್ಷಿ, ಕೀಟಗಳು ಇವುಗಳ ಹೊರತಾಗಿಯೂ ಪೃಥ್ವಿ, ಜಲ, ಅಗ್ನಿ, ವಾಯು ಮತ್ತು ವನಸ್ಪತಿಗಳನ್ನು ಸಹಜೀವಗಳೆಂದು ಒಪ್ಪಲಾಗಿದೆ. ಜೈನಧರ್ಮದ ಅನುಸಾರ ಈ ಜೀವಗಳಿಗೆ ಹೊಡೆಯದೇ ಇರುವುದು ಅಹಿಂಸೆಯಾಗಿದೆ. ಇನ್ನೊಬ್ಬರ ಮನಸ್ಸನ್ನು ನೋಯಿಸುವುದು, ಹಾಗೂ ತನ್ನಲ್ಲಿ ರಾಗ, ದ್ವೇಷ ವಿಕಾರಿಭಾವಗಳ ಉತ್ಪತ್ತಿಯಾಗುವುದು ಹಿಂಸೆಯೆಂದು ಒಪ್ಪಲಾಗಿದೆ. ಭಗವಾನ

---

5 ಜೈನ ಧರ್ಮ– ಮಿರ್ಜಿ ಅಣ್ಣಾರಾಯ ಪುಟ ಸಂಖ್ಯೆ–೨೭೯

6 ಪ್ರದಾನ ಸಂಪಾದಕರು ಶ್ರೀ ಜೀವಂಧರಕುಮಾರ, ಹೋತಪೇಟಿ, (ಲೇಖನ)'ಅಹಿಂಸೆ,' ಪು. 18.

ಮಹಾವೀರರ ಪ್ರಮುಖ ಸಂದೇಶ "ಜೀವಿಸು ಹಾಗೂ ಜೀವಿಸಲು ಬಿಡಿರಿ"[೭] ಎಂಬುದಾಗಿದೆ.

"ಅಹಿಂಸಾ ಪರಮೋ ಧರ್ಮಃ" ಅರ್ಥಾತ್ ಅಹಿಂಸೆ ಮನುಷ್ಯನ ಎಲ್ಲ ಧರ್ಮಗಳಿಗಿಂತಲೂ ಉಚ್ಚಧರ್ಮ ಮತ್ತು ಎಲ್ಲ ಕರ್ತವ್ಯಗಳಿಗಿಂತಲೂ ದೊಡ್ಡ ಕರ್ತವ್ಯ ಎನ್ನಲಾಗಿದೆ. ಜೈನ ಧರ್ಮದ ನಾಯಕರಾದ ಶ್ರೀ ವಿಜಯವಲ್ಲಭ ಸೂರಜಿಯವರು 'ಜೈನಿಝಮ್' ಎಂಬ ತನ್ನ ಪುಸ್ತಕದಲ್ಲಿ ಈ ರೀತಿ ಬರೆದಿದ್ದಾರೆ. "ಜೀವವು ಪವಿತ್ರವಾಗಿದೆ, ಅದು ಯಾವುದೇ ರೂಪದಲ್ಲಿರಲಿ, ಅದಕ್ಕೆ ತೊಂದರೆ ಕೊಡದಿರುವುದು ಅಹಿಂಸೆ ಆಗಿದೆ. ಇದು ನೈತಿಕತೆಯ ಶ್ರೇಷ್ಠ ಸಿದ್ಧಾಂತವಾಗಿದೆ. ಯಾವ ರೀತಿಯಲ್ಲಿಯೂ ಹಿಂಸೆ ಮಾಡದ ವ್ಯಕ್ತಿ ಸಜ್ಜನನಾಗಿದ್ದಾನೆ. ಪ್ರತಿಯೊಂದು ಧರ್ಮವು ಮಾನವ ಜೀವನವನ್ನು ಗೌರವಿಸುತ್ತದೆ. ಶಾರೀರಿಕ ಕಷ್ಟ, ಶಬ್ದ ಹಾಗೂ ವಿಚಾರಗಳ ಆಕ್ರಮಣ ಶೈಲಿಯೂ ಹಿಂಸೆ ಎನಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿ ಇದರಿಂದ ದೂರ ಉಳಿಯಬೇಕು. (ಪುಟ. 7-10) ಜೈನಧರ್ಮ ಅಹಿಂಸೆಯನ್ನು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸಿದೆ."[೮]

ಜೈನಧರ್ಮದಲ್ಲಿ ಬರೀ ಕೊಲ್ಲುವುದೇ ಹಿಂಸೆ ಅಲ್ಲ. ನಾವು ಗರ್ಭದಲ್ಲಿ ಜನಿಸಿ ಬರುವುದು ಹಿಂಸೆ, ಹುಟ್ಟುವಾಗ ಹಿಂಸೆ, ಸಾಯುವಾಗ ಹಿಂಸೆ, ಸಂಸಾರ ನಡೆಸುವಾಗ ಹಿಂಸೆ. ಹಾಗಾದರೆ ಹಿಂಸೆಯನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲವೆ? ಪ್ರಶ್ನೆ ಹಾಕಿಕೊಂಡರೆ ತೀರ್ಥಂಕರ ವಾಣಿಯಂತೆ ಸಂಸಾರೀ ಜೀವಕ್ಕೆ ಸಾಧ್ಯವಿಲ್ಲ. ಆದರೆ ಹಿಂಸೆಯ ದರ್ಜೆಯನ್ನು ಕಡಿಮೆ ಮಾಡಬಹುದು. ಹಿಂಸೆ ಅನೇಕ ವಿಧದಲ್ಲಿ ಸಂಭವಿಸುತ್ತದೆ. ಯಜ್ಞ ಯಾಗಾದಿಗಳಲ್ಲಿ, ಮಾಂಸಾಹಾರದಲ್ಲಿ, ಬೇಟೆಯಲ್ಲಿ, ವಾಣಿಜ್ಯದಲ್ಲಿ ಹೀಗೆ ಅನೇಕ ಕ್ಷೇತ್ರಗಳಲ್ಲಿ ಹಿಂಸೆ ಆಗುತ್ತಿರುತ್ತದೆ. ಪ್ರಪಂಚದ ನಾಲ್ಕು ದಿಕ್ಕಿನಲ್ಲಿಯೂ ಕೊಲ್ಲು, ಕೊಲ್ಲು, ಎನ್ನುವ ಪ್ರಚಾರವಿದೆಯೇ ವಿನಹ ಅಹಿಂಸೆಯ ಬಗ್ಗೆ ಪ್ರಚಾರವಿಲ್ಲ.

ಜೈನಯತಿಗಳಲ್ಲಿ ಶ್ವೇತಾಂಬರರು ಬಿಳಿಯಬಟ್ಟೆಯಿಂದ ತಮ್ಮ ಬಾಯಿಯನ್ನು ಮುಚ್ಚಿಕೊಳ್ಳುತ್ತಾರೆ ತಮ್ಮ ಉಸಿರಾಟದಿಂದ ಯಾವುದೇ ಜೀವಜಂತುಗಳು ಸಾಯದಿರಲೆಂದು, ತಾವು ಕುಳಿತುಕೊಳ್ಳು ಜಾಗದಲ್ಲಿ ಯಾವುದೇ ಪ್ರಾಣಿ ಸಾಯದಿದಲೆಂದು ತಮ್ಮ ಕೈಲ್ಲಿಂದ 'ಫಿಂಛಿ'ಯಿಂದ ಅದನ್ನು ಸ್ವಚ್ಛಗೊಳಿಸುತ್ತಾರೆ, ತಾವು ನಡೆಯುವ ಜಾಗದಲ್ಲೂ ಸರಿಯಾಗಿ ದೃಷ್ಠಿಹಾಯಿಸಿಯೇ ನಡೆಯುತ್ತಾರೆ, ಅಷ್ಟೆ ಅಲ್ಲದೇ ರಾತ್ರಿಯಾದ ನಂತರ ನಡೆದಾಡುವದಿಲ್ಲ. ಜೈನರು ಕುಡಿಯವ ನೀರನ್ನು ಬಟ್ಟೆಯಿಂದಲೇ ಸೋಯಿಸಿಯೇ ಕುಡಿಯುತ್ತಾರೆ, ಕಣ್ಣಿಗೆ ಕಾಣದ ಕ್ರಿಮಿ ಕೀಟಗಳನ್ನು ನೀರಿನ ಜೊತೆಗೆ ಹೋಗದಿರಲೆಂದು ಈ ಎಚ್ಚರಿಕೆ ವಹಿಸುತ್ತಾರೆ. ಊಟವನ್ನು ಕೂಡ ಸೂರ್ಯಾಸ್ಥಕ್ಕಿಂತ ಮಾದಲೇ ಮಾಡುತ್ತಾರೆ, ರಾತ್ರಿ ಭೋಜನದಿಂದ ಪ್ರಾಣಿಹಿಂಸೆಯಾಗುವ ಸಾದ್ಯೆತೆಗಳಿಗೆ ಹೀಗೆ ಜೈನಧರ್ಮ ಅತ್ಯಂತ ಸೂಕ್ಷ್ಮದೃಷ್ಠಿಯಿಂದ ಅಹಿಂಸೆ ಬಗೆಗೆ ಅತ್ಯಧಿಕ ಕಾಳಜಿ ವಹಿಸುತ್ತದೆ.

ಅಹಿಂಸೆಯ ಪರಿಣಾಮವಾಗಿ ಮಾಂಸಾಹಾರವನ್ನು ತ್ಯಜಿಸಿ ಸಸ್ಯಾಹಾರದ ಕಡೆಗೆ ಧಾಮೀಕ ಪ್ರವೃತಿಯ ಜನರು ಆಕರ್ಷಿತರಾದರು ಅಹಿಂಸೆಯ ಮಹತ್ವವನ್ನು ಎಲ್ಲಾ ಧರ್ಮಗಳು ಎತ್ತಿ ಹೇಳುತ್ತಿದ್ದವು ಪ್ರಾಚೀನಕಾಲದಲ್ಲಿ ಅಹಿಂಸೆಯ ಸಂದೇಶವನ್ನು ಗಂಭೀರ ಹಾಗೂ ವೈಜ್ಞಾನಿಕ ವ್ಯವಸ್ಥಿತ ರೂಪದಲ್ಲಿ ಮೊಟ್ಟ ಮೊದಲು ತೀರ್ಥಂಕರರು ಮತ್ತು ಅದರಲ್ಲಿಯೂ ಅಂತಿಮ ತೀರ್ಥಂಕರನಾದ ಭಗವಾನ ಮಹಾವೀರ ಪ್ರಚಾರಪಡಿಸಿದರು ಎಂದು ಇತಿಹಾಸ ಸಾರುತ್ತದೆ. ಆಧುನಿಕ ಯುಗದಲ್ಲಿ ಮಹಾತ್ಮಗಾಂಧಿಯವರು ಅಹಿಂಸೆಯನ್ನು ಹಿಮಾಲಯದಷ್ಟು ಉನ್ನತಕ್ಕೆ ಎತ್ತಿ ತೋರಿಸಿ ಹಾಗೂ ತಮ್ಮ ರಾಜಕೀಯ ಆಂದೋಲನದ ಅಸ್ತ್ರವನ್ನಾಗಿಯೂ ಈ ತತ್ವವನ್ನು ಅದರ ಮಹತ್ವವನ್ನು ಜಗತ್ತಿಗೆ ಸಾರಿದರು.

ಜೈನಧರ್ಮದ ಅನುಸಾರವಾಗಿ ಅಹಿಂಸೆ ಎಂದರೇ ಕೊಲ್ಲದೆ ಇರುವದು ಮಾತ್ರವಲ್ಲ "ಕಾಯೇನ ವಾಚಾ ಮನಸಾ ಅಂದರೆ ಇತರರಿಗೆ ನೋವನೊಂಟು ಮಾಡದಿರುವದು ಎಂದರ್ಥ. ಹಾಗೇ ಇತರರಿಂದ ಮಾಡಿಸದಿರುವದು, ಹಾಗೂ ಇತರರು ಮಾಡಿದ್ದನು ಅನುಮೋದಿಸದೇ ಇರುವದು ಅಹಿಂಸೆ ಎನಿಸುವುದು."[೯]

ಹಿಂಸೆಯ ಮೂಲಕಾರಣ ಸ್ವಾರ್ಥದಿಂದ ಮನುಷ್ಯನು ಅಂಧನಾಗುವದು, ಸ್ವಾರ್ಥದಿಂದ ಪ್ರೇರಿತನಾದ ಮನುಷ್ಯ ಹಿಂಸೆಗೆ ಸಿದ್ದನಾಗುತ್ತಾನೆ ಇಚ್ಛಾ ಪೂರ್ವಕವಾಗಿ ಕಷ್ಟ ಸಹಿಷ್ಣುತೆಯ ಅಭಿವ್ಯಕ್ತಿಯೇ ಅಹಿಂಸೆ. ಪೂರ್ಣವಾದ ಅಹಿಂಸೆ ಎಂದರೆ ಪೂರ್ತಿಯಾಗಿ ಕೇಡುಮಾಡದಿರುವುದು ಮಾತ್ರವಲ್ಲ ಎಲ್ಲಾ ಜೀವಿಗಳಿಗೆ ಒಳಿತುಂಟಾಗಲೆಂದು ಹಾರೈಸುವುದು.

> "ಸತ್ವೇಷು ಮೈತ್ರೀಂ ಗುಣಿಷು ಪ್ರಮೋದಂ
> ಕ್ಲಿಷ್ಟೇವೆ ಜೀವೇಷು ಕೃಪಾಪರತ್ವಂ
> ಮಾದ್ಯಸ್ಥಭಾವಂ ವಿಪರೀತ ವೃತಾ
> ಸದಾ ಮಮಾತಾ ವಿಧಿಧಾತು ದೇವ॥"[೧೦]

ಎಂಬ ಚಿಂತನೆ ಜೈನ ಧರ್ಮದ ಅಹಿಂಸಾ ಧರ್ಮ ಪಾಲನೆಗೆ ಮಾದರಿಯಾಗಿದೆ. ಹಿಂಸೆ ಯುದ್ದ ರಕ್ತಪಾತ ಎಂದಷ್ಟೆ ಭಾವಿಸಬೇಕಾಗಿಲ್ಲ ವಾಚಕ ಮಾನಸಿಕ ಹಿಂಸೆಯೂ ಹಿಂಸೆಗೆ ಇನ್ನೂಬ್ಬರ ಮನಸ್ಸು ನೋಯುವಂತೆ. ಮುಖಭಂಗವಾಗುವೆಂತೆ ಮಾತನಾಡುವದು ಹಾಗೂ ಅಂತಹ ಕೃತ್ಯಗಳನ್ನ ನೆನೆಯುವುದು ವಾಚಕ ಮತ್ತು ಮಾನಸಿಕ ಹಿಂಸೆ ಇಂತಹ ಹೀಸೆ ಇಂದಲೂ ನಾವು ದೂರ ವಿರಬೇಕು.

ಅಹಿಂಸೆಯೊಡನೆ ಸತ್ಯವನ್ನ ಬೆರಸಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವುದಕ್ಕಾಗಿ ಜಗತ್ತಿನಲ್ಲಿ ಅತ್ಯಂತ ಪ್ರಬಲ ರಾಷ್ಟ್ರವಾಗಿದ್ದ ಇಂಗ್ಲಂಡಿನೋಡನೆ ಹೋರಾಡಿ ಗೆದ್ದ ಮಹಾತ್ಮ ಗಾಂಧಿಯವರು ಕೇವಲ ರಾಜಕೀಯ ಸಾಮಾಜಿಕ ರಾಷ್ಟ್ರೀಯ ಅಂತರರಾಷ್ಟ್ರೀಯ ಕ್ಷೇತ್ರಗಳಲ್ಲೂ ಅಹಿಂಸೆಯ ಬಳಿಕೆ ಸಾಧ್ಯವೆಂದು ತೋರಿಸಿದವರು ಮಹಾತ್ಮ ಗಾಂಧಿಗೆ ಕೊಡ ಅಹಿಂಸೆಗೆ ದೊರೆತ ಮೂಲಪ್ರೇರಣೆ ಜೈನಧರ್ಮವಾಗಿದೆ ಎಂಬುವದನ್ನು ಮರೆಯುವಂತಿಲ್ಲ. ಹೀಗೆ ವಿಶ್ವದ ಎಲ್ಲಾಧರ್ಮಗಳಿಗೂ ಸ್ವೀಕಾರ್ಯವಾಗಿರುವ ಏಕಮಾತ್ರ ಆದರ್ಶವಾಗಿದ್ದು ಶತ–ಶತಮಾನಗಳಿಂದ ಮಾನವಕುಲಕ್ಕೆ ಬೆಳಕನ್ನು ನೀಡುತ್ತಿರುವ ತತ್ವವೆಂದರೆ ಅಹಿಂಸೆಯಾಗಿದೆ.

ಜೈನಧರ್ಮವು ಭೋದಿಸಿದ ಅಹಿಂಸೆಯು ಪ್ರಪಂಚದಲ್ಲಿಯ ಎಂಥ ಮನುಷ್ಯನಿಗೂ ಆಚರಿಸಲಿಕ್ಕೆ ಬರುವಂತಹದು. ಅಹಿಂಸೆಯ ಆಚರಣೆಯಲ್ಲಿ ಶ್ರೇಷ್ಠ–ಕನಿಷ್ಠ ತರಗತಿಗಳಿರಬಹುದು ಆದರೆ ಪ್ರತಿಯೊಬ್ಬನೂ ತನ್ನ ನಿತ್ಯ ಜೀವನದಲ್ಲಿ ಅಹಿಂಸೆಯನ್ನು ರೂಡಿಯಲ್ಲಿ ತರಬಲ್ಲನೂ. ತಾನೂ ಅಹಿಂಸೆಯನ್ನು ಎಷ್ಟು ಪಾಲಿಸುವನೋ ಅಷ್ಟರಮಟ್ಟಿಗಾದರೂ ಆತನ ಅಹಿಂಸಾತ್ಮಕನಾಗಿರುತ್ತಾನೆ. ಇಂಥ ಅಹಿಂಸಾತ್ಮಕ ಭಾವವು ವ್ಯಕ್ತಿಗಳಲ್ಲಿ ಬೆಳೆಯುತ್ತಾ ಹೋದಂತೆ ಸಮಾಜದ ಕಲ್ಯಾಣವಾಗುವದು. ಮಾನವಹಿತದ ಮೂಲಮಂತ್ರವು ಅಹಿಂಸೆಯಾಗಿದೆ. ಈ ಅಹಿಂಸೆಯು ಜೈನಧರ್ಮದ ಸುತ್ರವಾಗಿದೆ. ಮಾನವ ಜೀವನದ ಆದರ್ಶಸಾಧನೆಯನ್ನ ಜೈನಧರ್ಮವು ಅಹಿಂಸೆಯಿಂದ ಆರಂಭಿಸಿ, ಅಹಿಂಸೆಯಲ್ಲಯೇ ಕೊನೆಗೊಳಿಸುತ್ತದೆ

7 ರತನ ನೇಮಿನಾಥ ಕೋಟಿ – ಜೈನಧರ್ಮ ತಿಳಿಯಿರಿ, ಪು. 15.

8 ಆಹಾರ ಅಹಿಂಸೆಧರ್ಮ – ಡಾ. ಎಮ್.ಜೆ. ಇನಾಮದಾರ, ಪು. 16.

9 ಜೈನ ಧರ್ಮಕ್ಕೊಂದು ಕೈಪಿಡಿ – ಎಸ್ ಪಿ ಪದ್ಮಪ್ರಸಾದ ಪುಟ ಸಂಖ್ಯೆ–೫೬

10 ಅಹಿಂಸೆ–(ಲೇಖನ)– ನಾ ವುಜರೆ ಪುಟ ಸಂಖ್ಯೆ ೪೯

ಆದರಿಂದ ಭಾವಹಿಂಸೆಯನ್ನ ತೊರೆದು ಆತ್ಮಸ್ವರೂಪದಲ್ಲಿರುವವನೇ ಮುಕ್ತ ಜಿನನು.

**ಉಪಸಂಹಾರ**

ಒಟ್ಟಾರೆಯಾಗಿ ಮಾನವಹಿತದ ಮೂಲಮಂತ್ರವು ಅಹಿಂಸೆಯಾಗಿದೆ. ವಿಶ್ವದ ಎಲ್ಲ ಧರ್ಮಗಳು ತಮ್ಮ ತತ್ತ್ವ ಮತ್ತು ಸಿದ್ಧಾಂತಗಳಿಗೆ ಅನುಗುಣವಾಗಿ ಹಿಂಸೆಯನ್ನು ಪಾಲಿಸುತ್ತಾ ಸಾಗುತ್ತಿವೆ. ಹೀಗೆ ಹಿಂಸೆ ಹಾಗೂ ಅಹಿಂಸೆಯ ವಿಚಾರಮಾಡಿ ಜೀವಿಸಿರಿ ಮತ್ತು ಜೀವಿಸಲು ಬಿಡಿ. ಪ್ರೀತಿಸಿರಿ ಪ್ರೀತಿಸಲು ಬಿಡಿ, ಬದುಕು–ಬದುಕಲು ಬಿಡಿ ಈ ತತ್ವಗಳಿಂದ ನಡೆದರೆ ನಮ್ಮ ಏಳ್ಗೆ, ಅಭಿವೃದಿ, ಕಲ್ಯಾಣ ಆಗಲು ಸಾಧ್ಯ. ಭಾರತದಂತಹ ಅಹಿಂಸಾತ್ಮಕ ದೇಶದಲ್ಲಿ ಅಹಿಂಸೆ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತದೆ.

**ಗ್ರಂಥಋಣ**

1. ಮಿರ್ಜಿ ಅಣ್ಣಾರಾಯ, ‘ಜೈನಧರ್ಮ’ ಶಾಂತಿಸೇವಾಸದನ, ಸೇಡಬಾಳ, 1952.
2. ಎಸ್.ಪಿ. ಪದ್ಮಪ್ರಸಾದ – (ಕ. ಅ) ಜೈನಧರ್ಮಕ್ಕೊಂದು ಕೈಪಿಡಿ 2012
3. ಡಾ. ಅಕ್ಕಮಹಾದೇವಿ – ಸಂ. ‘ಪಾಯಣ್ಣ ವಿರಚಿತ’ ‘ಅಹಿಂಸಾ ಚರಿತೆ’ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2008.
4. ರತನಚಂದ ಕೋಟಿ –(ಕ.ಅ) ‘ಜೈನಧರ್ಮ ತಿಳಿಯಿರಿ,’ ಪ್ರಕಾಶಕರು ಶ್ರೀ ಶ್ರೀಪಾಲ ಶಿವಪ್ಪ ಅವಟೆ, ಇಚಲಕರಂಜಿ, 2011.
5. ಶ್ರೀ ಜೀವಂಧರಕುಮಾರ ಹೋತಪೇಟಿ – ಸಂ ‘ಅಹಿಂಸೆ’ ಸ್ಮರಣ ಸಂಚಿಕೆ, ಪ್ರಕಾಶಕರು, ಎಸ್.ಡಿ.ಜೆ.ಎಂ.ಐ. ಆಡಳಿತ ಮಂಡಳಿ ಶ್ರೀ ಕ್ಷೇತ್ರ ಶ್ರವಣಬೆಳಗೊಳ, 1995.
6. ಹಸನ್ ನಯಿಂ ಸುರಕೋಡ, (ಕನ್ನಡಕ್ಕೆ) ‘ಇಸ್ಲಾಮೀ ಜಗತ್ತು ಮತ್ತು ಮುಸ್ಲಿಮರ ಸಮಸ್ಯೆಗಳು,’ ಲೋಹಿಯಾ ಪ್ರಕಾಶನ ಬಳ್ಳಾರಿ, 2012.
7. ಡಾ. ಎಂ.ಜೆ. ಇನಾಮದಾರ, ‘ಆಹಾರ–ಅಹಿಂಸೆ–ಧರ್ಮ’ ಶಾಂತಿ ಪ್ರಕಾಶನ ಮಂಗಳೂರು, 2011.
8. ಜೆ.ಪಿ. ರಾಜರತ್ನಂ, ‘ಇಸ್ಲಾಂ ಧರ್ಮದ ಪರಿಮಳ,’ ಸಪ್ನ ಬುಕ್ ಹೌಸ್, ಬೆಂಗಳೂರು, 2008.